## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 586 |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ |
| ಉತ್ತರಿಸುವ ದಿನಾಂಕ | : | 23.12.2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯಲ್ಲಿ 2018 ರಿಂದ 2022 ರ ಅವಧಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಒಟ್ಟು ಕೊಳವೆಬಾವಿಗಳ ಸಂಖ್ಯೆ ಎಷ್ಟು? | **ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ**<br>ಗಂಗಾ ಕಲ್ಯಾಣ ಯೋಜನೆಯಡಿ 2018-19ನೇ ಸಾಲಿನಿಂದ 2019-20ನೇ ಸಾಲಿನ ವರೆಗೆ ಒಟ್ಟು 5675 ಕೊಳವೆಬಾವಿಗಳನ್ನು ಕೊರೆಯಲಾಗಿದೆ. ವಿವರ ಈ ಕೆಳಕಂಡಂತೆದೆ. |

| ಕ್ರ.ಸಂ | ವರ್ಷ | ಕೊರೆದ ಕೊಳವೆ ಬಾವಿಗಳ ಸಂಖ್ಯೆ |
|---|---|---|
| 01 | 2018-19 | 4517 |
| 02 | 2019-20 | 812 |
| 03 | 2020-21 | 346 |
| | ಒಟ್ಟು | 5675 |

2021-22ನೇ ಸಾಲಿನಿಂದ ನೇರ ಸವಲತ್ತು ವರ್ಗಾವಣೆ (DBT) ಪದ್ಧತಿ ಮೂಲಕ ಯೋಜನೆ ಅನುಷ್ಠಾನಗೊಳಿಸಲು ಗುತ್ತಿಗೆದಾರರನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಎಂಪ್ಯಾನೆಲ್ ಮಾಡಿಕೊಳ್ಳುವ (ಟೆಂಡರ್) ಪ್ರಕ್ರಿಯು ಪ್ರಗತಿಯಲ್ಲಿದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ**:

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕರ್ನಾಟಕ ಭೋವಿ ಅಭಿವೃದ್ಧಿ

ನಿಗಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ 2018-2022ರ ಅವಧಿಯಲ್ಲಿ ಕೊರೆಯಲಾದ ಕೊಳವೆಬಾವಿಗಳ ವಿವಿರ ಈ ಕೆಳಕಂಡಂತಿದೆ,

| ವರ್ಷ | ಕೊರೆದ ಯಶಸ್ವಿ ಕೊಳವೆ ಬಾವಿಗಳ ಸಂಖ್ಯೆ |
|---|---|
| 2018-19 | 775 |
| 2019-20 | 0 |
| 2020-21 | 0 |
| 2021-22 | 0 |
| 2022-23 | 0 |

**ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ**

2018-19 ನೇ ಸಾಲಿನ ವರೆಗೆ ನಿಗಮದ ಪರವಾಗಿ ಗಂಗಾ ಕಲ್ಯಾಣ ಯೋಜನೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿದೆ.

2019-20 ನೇ ಸಾಲಿಗೆ ನಿಗಮಕ್ಕೆ ಗಂಗಾ ಕಲ್ಯಾಣ ಯೋಜನೆಗೆ ಹಂಚಿಕೆಯಾದ ಅನುದಾನವು ಬಿಡುಗಡೆಯಾಗದೇ ಇರುವ ಕಾರಣ ಯೋಜಯನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ..

ಸಕಇ 399 ಎಸ್ ಡಿ ಸಿ 2022, ದಿನಾಂಕ:14-16-2022 ರಂತೆ ಜಿಲ್ಲಾವಾರು ಏಜೆನ್ಸಿಗಳ ನೇಮಕಾತಿಗಾಗಿ ಎಂಪ್ಯಾನಲ್ಮೆಂಟ್ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪ್ರಕ್ರಿಯೆ ಅಂತಿಮಗೊಂಡ ನಂತರ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮವಹಿಸಲಾಗುವುದು.

**ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ:**

2020-21 ನೇ ಸಾಲಿನ ಸ್ವತಂತ್ರವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಾರಂಭ ಮಾಡಿರುತ್ತದೆ.

2018-19 ಮತ್ತು 2019-20 ನೇ ಸಾಲಿನ ಈ ನಿಗಮದ ಯೋಜನೆಗಳನ್ನು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿರುತ್ತದೆ.

2020-21 ನೇ ಸಾಲಿನ ಟೆಂಡರ್‌ನ್ನು ಈ ನಿಗಮದಿಂದ ಆಹ್ವಾನಿಸಲಾಗಿದ್ದು, ಕೊರೆಯಲಾದ ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿದೆ.

<table>
<tr>
<td></td>
<td></td>
<td>
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ಕೊರೆದ ಕೊಳವೆ ಬಾವಿಗಳ ಸಂಖ್ಯೆ</th></tr>
<tr><td>1.</td><td>2018-19</td><td>2469</td></tr>
<tr><td>2.</td><td>2019-20</td><td>25</td></tr>
<tr><td>3.</td><td>2020-21</td><td>122</td></tr>
<tr><td colspan="2">ಒಟ್ಟು</td><td>2616</td></tr>
</table>
2020-21ನೇ ಸಾಲಿನ ಬಾಕಿ ಕೊಳವೆ ಬಾವಿಗಳನ್ನು ತ್ವರಿತವಾಗಿ ಕೊರೆಸಿ ಪೂರ್ಣಗೊಳಿಸಲಾಗುವುದು.<br>
2020-21 ನೇ ಸಾಲಿ ಕೊಳವೆ ಬಾವಿಗಳನ್ನು ಡಿ.ಬಿ.ಟಿ ಮೂಲಕ ಅನುಷ್ಠಾನಗೊಳಿಸಲು ಈ ನಿಗಮವನ್ನು ಒಳಗೊಂಡಂತೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ Expression of Interest ಆಹ್ವಾನಿಸಿದ್ದು, ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ತ್ವರಿತವಾಗಿ ಕೊಳವೆ ಬಾವಿ ಕೊರೆಸಿ ಪೂರ್ಣಗೊಳಿಸಲಾಗುವುದು.
</td>
</tr>
<tr>
<td>ಆ)</td>
<td>ಇವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?</td>
<td>ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ<br>
ಗಂಗಾ ಕಲ್ಯಾಣ ಯೋಜನೆಯಡಿ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಿ ಒಪ್ಪಂದ ಕರಾರು ಮಾಡಿಕೊಂಡು "ನೀರಿಲ್ಲದಿದ್ದರೆ ಹಣವಿಲ್ಲ" ಎಂಬ ಷರತ್ತಿನ ಮೂಲಕ ಎಲ್-1 ಗುತ್ತಿಗೆದಾರರುಗಳಿಗೆ ಕಾರ್ಯಾದೇಶ ನೀಡುವುದರಿಂದ ವಿಫಲ ಕೊಳವೆಬಾವಿಗಳು ಇರುವುದಿಲ್ಲ. ಕೊಳವೆಬಾವಿ ಕೊರೆದ ಒಂದು ವರ್ಷ ಗ್ಯಾರಂಟಿ ಅವಧಿಯಲ್ಲಿ ಕೊಳವೆಬಾವಿ ವಿಫಲಗೊಂಡಲ್ಲಿ ಗುತ್ತಿಗೆದಾರ ಒಟ್ಟು ಮೊತ್ತದಲ್ಲಿ ಕಡಿತಗೊಳಿಸಿರುವ ಶೇ.10ರ ಮೊತ್ತದಲ್ಲಿ (Payable) ಬಾಬ್ತಿನಲ್ಲಿ ಡೆಬಿಟ್ ಹಾಕಿ ಸಫಲ ಕೊಳವೆಬಾವಿ ಕೊರೆಸಿಕೊಡಲಾಗುವುದು.<br>
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ<br>
ಕೊರೆದ ಕೊಳವೆ ಬಾವಿಗಳ ಪೈಕಿ ಯಾವುದೇ ಕೊಳವೆ ಬಾವಿಯು ವಿಫಲವಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.<br>
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ:<br>
ಈ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯ ಟೆಂಡರ್ ನ್ನು ಈ ಪ್ರೋಕ್ಯೂರ್‌ಮೆಂಟ್ ಮೂಲಕ</td>
</tr>
</table>

<table>
<tr><td></td><td></td><td>"ನೀರಿಲ್ಲದಿದ್ದರೆ ಹಣವಿಲ್ಲ" ಎಂಬ ಷರತ್ತಿನ ಮೇರೆಗೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ವಿಫಲ ಕೊಳವೆ ಬಾವಿಗಳು ಯಾವುದು ಇರುವುದಿಲ್ಲ.</td></tr>
<tr><td>ಇ)</td><td>ಕೊರೆಯಲಾದ ಎಲ್ಲಾ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪ್ ಸೆಟ್‌ಗಳನ್ನು ಅಳವಡಿಸಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆಯೇ?</td><td>
<table>
<tr><th>ಕ್ರ.ಸಂ</th><th>ವರ್ಷ</th><th>ಕೊರೆದ ಕೊಳವೆ ಬಾವಿಗಳ ಸಂಖ್ಯೆ</th><th>ವಿದ್ಯುದ್ದೀಕರಣಗೊಂಡ ಕೊಳವೆ ಬಾವಿಗಳ ಸಂಖ್ಯೆ</th></tr>
<tr><td>01</td><td>2018-19</td><td>4517</td><td>4101</td></tr>
<tr><td>02</td><td>2019-20</td><td>812</td><td>394</td></tr>
<tr><td>03</td><td>2020-21</td><td>346</td><td>163</td></tr>
<tr><td colspan="2">ಒಟ್ಟು</td><td>5675</td><td>4658</td></tr>
</table>
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ:<br>
ಕೊರೆಯಲಾದ ಕೊಳವೆ ಬಾವಿಗಳ ವಿದ್ಯುತ್ ಸಂಪರ್ಕ ಕಲ್ಪಿಸಲು ಎಸ್ಕ್ರಾಂ ಗಳಿಗೆ ನಿಗಮದಿಂದ ಹಣ ಬಿಡುಗಡೆ ಮಾಡಲಾಗಿದೆ. ಈ ಮಧ್ಯೆ ನಿಗಮದ ಹಿಂದಿನ ಅಧಿಕಾರಿಗಳು ರಸಗಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ತಡೆಯಾಜ್ಞೆ ಇದ್ದುದ್ದರಿಂದ ಪಂಪ್ ಸೆಟ್ ಸರಬರಾಜು ಮಾಡುವ ಪ್ರಕ್ರಿಯೆಯಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ತಡೆಯಾಜ್ಞೆಯನ್ನು ಸರ್ಕಾರದ ಹಂತದಲ್ಲಿ ತೆರವುಗೊಳಿಸಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.<br>
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ:
<table>
<tr><th>ಕ್ರ.ಸಂ</th><th>ವರ್ಷ</th><th>ಕೊರೆದ ಕೊಳವೆ ಬಾವಿಗಳ ಸಂಖ್ಯೆ</th><th>ವಿದ್ಯುದ್ದೀಕರಣಗೊಂಡ ಕೊಳವೆ ಬಾವಿಗಳ ಸಂಖ್ಯೆ</th></tr>
<tr><td>01</td><td>2018-19</td><td>2469</td><td>2000</td></tr>
<tr><td>02</td><td>2019-20</td><td>25</td><td>15</td></tr>
<tr><td>03</td><td>2020-21</td><td>122</td><td>73</td></tr>
</table>
ಈ ನಿಗಮಕ್ಕೆ ಸಂಬಂಧಿಸಿದಂತೆ ಕೊರೆಯಲಾದ ಕೊಳವೆ ಬಾವಿಗಳ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.
</td></tr>
</table>

| | | |
|---|---|---|
| ಈ) | ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಕೊಳವೆಬಾವಿಗಳಿಗೆ ಕ್ರಮ ನಡೆದಿರುವ ಬಗ್ಗೆ ನೀಡಿರುವ ದೂರು ಅರ್ಜಿಗಳ ಕುರಿತಾಗಿ ಕ್ರಮ ಕೈಗೊಳ್ಳಲಾಗಿದೆಯೇ? | **ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ**<br>ಸ್ವೀಕೃತವಾದ ದೂರುಗಳ ಬಗ್ಗೆ ನಿಗಮದ (ವಿಜಿಲೆನ್ಸ್) ಜಾಗೃತಿ ಕೋಶದ ಅಧಿಕಾರಿಗಳ ಮೂಲಕ ತನಿಖೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br>**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ**<br>ಗಂಗಾ ಕಲ್ಯಾಣ ಯೋಜನೆಯಡಿ ಪ್ರಸ್ತುತ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಅಕ್ರಮ ನಡೆದಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. |
| ಉ) | ನಕಲಿ ದಾಖಲೆ ಸಲ್ಲಿಸಿ ಬಿಲ್ ಮಾಡಿರುವುದರ ಬಗ್ಗೆ ತನಿಖೆ ನಡೆದಿದೆಯೇ? | **ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ**<br>ಈ ವರೆವಿಗೂ ಅಂತಹ ಪ್ರಕಣಗಳು ದಾಖಲಾಗಿರುವುದಿಲ್ಲ.<br>**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ**<br>ನಕಲಿ ದಾಖಲೆ ಸಲ್ಲಿಸಿ ಬಿಲ್ ಮಾಡಿರುವುದರ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ<br>**ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ:**<br>ಈ ವರೆವಿಗೂ ಅಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಊ) | ಅಕ್ರಮವೆಸಗಿರುವ ಏಜೆನ್ಸಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ? | ಇಲ್ಲ. |

**ಸಂಖ್ಯೆ: ಸಕಇ 592 ಎಸ್‌ಡಿಸಿ 2022**

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು